ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಬಿ.ಟಿ.ಎಮ್ ಲೇಔಟ್

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ಬಿ,ಟಿ.ಎಂ ಲೇಔಟ್  ಒಳನೋಟ

1. ಪ್ರದೇಶ: 15 sq. km

2. ಜನಸಂಖ್ಯೆ : 318678

3. ವಾರ್ಡ್ : ಲಕ್ಕಸಂದ್ರ ಆಡುಗೋಡಿ, ಈಜಿಪುರ, ಕೋರಮಂಗಲ, ಸುದ್ದಗುಂಟೆ ಪಾಳ್ಯ, ಮಡಿವಾಳ,ಜಕ್ಕಸಂದ್ರ, ಬಿ,ಟಿ.ಎಂ ಲೇಔಟ್

4. ಒಟ್ಟು ಗೃಹಗಳು : 83789

5. ರಸ್ತೆ ವಿಸ್ತೀರ್ಣ :  356 km

6)ಕೆರೆಗಳು : ಮೇಸ್ತ್ರಿ ಪಾಳ್ಯ ತಾವರೆಕೆರೆ,

7)ಆರಕ್ಷಕ ಠಾಣೆ : ಆಡುಗೋಡಿ, ಕೋರಮಂಗಲ, ಮಡಿವಾಳ, ಮೈಕೋ ಲೇಔಟ್.

8) ಬಸ್ ನಿಲ್ದಾಣಗಳು :  132

9) ಅಗ್ನಿಶಾಮಕ ಕೇಂದ್ರ :1

10) ಸರ್ಕಾರಿ ಶಾಲೆಗಳು :28

11. ಆಟದ ಮೈದಾನ :10

12. ಪಾರ್ಕ್‌ಗಳು: 71

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ಧಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ಬಿಟಿಎಂ ಲೇಔಟ್

### ಪ್ರಮುಖ 5 ಬೇಡಿಕೆಗಳು

### ಸಂಚಾರ ಮತ್ತು ಮೂಲಭೂತ ಸೌಕರ್ಯ

1. ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರವು ಹೆಚ್ಚಿನ ಸಂಚಾರ ದಟ್ಟಣೆಯುಳ್ಳ ಪ್ರದೇಶವಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವಲ್ಲಿ

ಸಾರ್ವಜನಿಕ ಸಾರಿಗೆಯ ಲಭ್ಯತೆಯ ಮೌಲ್ಯಮಾಪನ ಮತ್ತು ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸಲು ಅಭಿಯಾನಗಳು ಮತ್ತು ಉಪಕ್ರಮಗಳು ಅಗತ್ಯ.

2. ಬಿಟಿಎಂ ಲೇಔಟ್‌ನಲ್ಲಿ ಪ್ರಸ್ತುತ ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ ಸುಗಮ ಟ್ರಾಫಿಕ್‌ಗಾಗಿ ಟ್ರಾಫಿಕ್ ನಿರ್ವಹಣಾ ಯೋಜನೆಯ ಅವಶ್ಯಕತೆ ಇದೆ.

3. ಅಡ್ಡಾದಿಡ್ಡಿ ಪಾರ್ಕಿಂಗ್ ಅನ್ನು ನಿವಾರಿಸಲು ಮತ್ತು ಖಾಸಗಿ ವಾಹನಗಳನ್ನು ನಿಯಂತ್ರಿಸಲು ಪಾವತಿಸಿ ಬಳಸಲಾಗುವ ಬಹು ಹಂತದ ಪಾರ್ಕಿಂಗ್ ಅಗತ್ಯವಿದೆ.

4. ಬಿಟಿಎಂ ಲೇಔಟ್‌ನಲ್ಲಿ ಬೀದಿಬದಿಯ ವ್ಯಾಪಾರಗಳಿಗೆ ನಿಗದಿಗೊಳಿದ ಜಾಗವುಳ್ಳ ಮತ್ತು ನಡೆಯಲು ಅನುಕೂಲವಾಗುವ ಪಾದಚಾರಿ ಮಾರ್ಗಗಳು

5. ರಸ್ತೆ ಮತ್ತು ಇತರೆ ಮೂಲಭೂತ ಸೌಕರ್ಯ ಕೆಲಸಗಳಿಗಾಗಿ ಸಾರ್ವಜನಿಕ ಸಮಾಲೋಚನೆ ನಡೆಸುವುದು ಹಾಗೂ ಯೋಜನೆಗಳ ವಿವರ ಮತ್ತು ನಿರ್ದಿಷ್ಟತೆಗಳನ್ನು ನಾಗರೀಕರೊಂದಿಗೆ ಹಂಚಿಕೊಳ್ಳುವುದು.

## ನೀರು

1. ಬಿಟಿಎಂ ಲೇಔಟ್‌ನಲ್ಲಿ ನಗರಪ್ರದೇಶ ಪ್ರವಾಹ ಒಂದು ಗಂಭೀರ ಸಮಸ್ಯೆಯಾಗಿದೆ. ಈ ರೀತಿಯ ಪ್ರವಾಹವನ್ನು ತಡೆಗಟ್ಟಲು ಯೋಜನೆ ಹಾಗೂ ವಿಕೋಪ ನಿರ್ವಹಣೆ ಯೋಜನೆಗಳು ಅವಶ್ಯಕವಾಗಿದೆ.

2. ನೀರು ಸರಬರಾಜು ಮಾಡುವ ಸಮಯವನ್ನು ನಾಗರೀಕರಿಗೆ ತಿಳಿಸಬೇಕು. ಈಗಾಗಲೇ ಅಳವಡಿಸಲಾಗಿರುವ ಆರ್‌ಓ ಶುದ್ಧಿಕರಣ ಘಟಕಗಳ ನೀರಿನ ಗುಣಮಟ್ಟವನ್ನು ಪರೀಕ್ಷಿಸಬೇಕು. ನೀರಿನ ಗುಣಮಟ್ಟ ಮಾಹಿತಿಯನ್ನು ಸಾರ್ವಜನಿಕರಿಗೆ ದೊರಕುವಂತೆ ಮಾಡಬೇಕು.

3. ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಅಭಿಯಾನವನ್ನು ನಡೆಸಬೇಕು ಮತ್ತು ಮಳೆನೀರು ಕೊಯ್ಲು ತಜ್ಞರು ಮತ್ತು ನೀರು ಉಳಿಸುವ ವಾಯುಪೂರಕ (ಏರೇಟರ್)ದÀಂತಹ ಸಾಧನಗಳ ಮಾಹಿತಿ ಸುಲಭವಾಗಿ ದೊರೆಯಲು ಕಿಯೋಸ್ಕ್‌ಗಳು ಲಭ್ಯವಾಗುವಂತೆ ಮಾಡಬೇಕು

4. ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಸಾಧನವನ್ನು ಅಳವಡಿಸಬೇಕು.

5. ಮಳೆ ನೀರು ಕಾಲುವೆ ಮತ್ತು ಮೋರಿಗಳಲ್ಲಿ ಕಾಲಕಾಲಕ್ಕೆ ಹೂಳು ಎತ್ತುವುದು ಮತ್ತು ನಿರ್ವಹಿಸುವುದು

## ಪರಿಸರ ಮತ್ತು ಆರೋಗ್ಯ

1. ವಾಹನಗಳ ಸಂಖ್ಯೆಯಲ್ಲಿನ ಹೆಚ್ಚಳ ಮತ್ತು ಪ್ರಗತಿಯಲ್ಲಿರುವ ನಿರ್ಮಾಣ ಕಾರ್ಯದಿಂದಾಗಿ ಕೆಲವು ಪ್ರದೇಶಗಳಲ್ಲಿ ವಾಯುಮಾಲಿನ್ಯ ಹೆಚ್ಚಿದೆ. ವಾಯು ಗುಣಮಟ್ಟ ನಿಗಾವಣೆ ಉಪಕರಣಗಳ ಅಳವಡಿಕೆ ಮತ್ತು ವಾಯು ಗುಣಮಟ್ಟವನ್ನು ಸುಧಾರಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.

2. ಹಾಂಕಿಂಗ್ ಮತ್ತು ಹೆಚ್ಚು ಶಬ್ದ ಮಾಡುವ ವಾಹನಗಳಿಂದಾಗಿ ಹೆಚ್ಚಿನ ಶಬ್ದ ಮಾಲಿನ್ಯವವಾಗುತ್ತಿದೆ. ಶಬ್ದ ಮಾಲಿನ್ಯ ನಿಯಂತ್ರಿಸಲು ಟ್ರಾಫಿಕ್ ಪೊಲೀಸರ ಸಹಯೋಗದಲ್ಲಿ ಅಭಿಯಾನಗಳು ಹಾಗೂ ಉಪಕ್ರಮಗಳನ್ನು ಕೈಗೊಳ್ಳುವುದು.

3. ಬಿಟಿಎಂ ಲೇಔಟ್‌ನಲ್ಲಿರುವ ಹಸಿರು ಹೊದಿಕೆ (ವೈಜ್ಞಾನಿಕ ರೀತ್ಯಾ ಮರ ಕತ್ತರಿಸುವಿಕೆ) ಮತ್ತು ಬಯಲು ಪ್ರದೇಶಗಳ ನಿಗಾವಣೆ ಮತ್ತು ನಿರ್ವಹಣೆ

4. ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳನ್ನು ಆದ್ಯತೆಗೊಳಿಸುವುದು

5. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪಾರ್ಕ್‌ಗಳಲ್ಲಿ ಶೌಚಾಲಯಗಳ ಲಭ್ಯತೆ

## ತ್ಯಾಜ್ಯ ನಿರ್ವಹಣೆ

1. ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

2. ಎಲ್ಲಾ ವಾರ್ಡ್‌ಗಳೂ ಅತ್ಯಾಧುನಿಕ ಒಣಕಸ ಸಂಗ್ರಹಣಾ ಕೇಂದ್ರಗಳನ್ನು ಹೊಂದಿರಬೇಕು ಮತ್ತು ಎಲ್ಲಿ ಕಸ ಉತ್ಪಾದನೆಯಾಗುತ್ತದೋ ಅದೇ ವಾರ್ಡ್‌ನಲ್ಲೇ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿರಬೇಕು.

3. ಬಿಟಿಎಂ ಕ್ಷೇತ್ರದಾದ್ಯಂತ ಕಣ್ಣಿಗೆ ಗೋಚರಿಸುವಂತಹ ಸ್ವಚ್ಛತೆಯನ್ನು ಆದ್ಯತೆಯಾಗಿಸಿಕೊಳ್ಳಬೇಕು. ಎಲ್ಲಾ ಗಲೀಜು ಪ್ರದೇಶಗಳನ್ನು ಗುರುತಿಸಬೇಕು, ಸುಂದರಗೊಳಿಸಬೇಕು ಮತ್ತು ನಿಗಾ ವಹಿಸಲು ಕ್ರಮಗಳನ್ನು ಕೈಗೊಳ್ಳಬೇಕು.

4. ಮಡಿವಾಳ ಮಾರುಕಟ್ಟೆಯನ್ನು ಪುನರುಜ್ಜೀವನಗೊಳಿಸಬೇಕು ಮತ್ತು ಗೋಚರಿಸುವ ಸ್ವಚ್ಛತೆ ಹಾಗೂ ತ್ಯಾಜ್ಯ ನಿರ್ವಹಣೆಗಾಗಿ ಮಾದರಿ ಪ್ರದರ್ಶಿಸಬೇಕು.

5. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ವರ್ಗಾಯಿಸಲು ಅನುಕೂಲವಾಗುವಂತೆ ವೈಜ್ಞಾನಿಕ ವರ್ಗ ಸ್ಥಳಗಳ ಸ್ಥಾಪನೆ.

## ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಹಾಗೂ ಅಭಿವೃದ್ಧಿ

1. ಬಿಟಿಎಂ ಲೇಔಟ್ ಬೆಂಗಳೂರು ನಗರದಲ್ಲೇ ಹೆಚ್ಚಿನ ಸಂಖ್ಯೆಯ ಯುವಜನತೆಯನ್ನು ಒಳಗೊಂಡ ಕ್ಷೇತ್ರವೆನಿಸಿದೆ. ಆದ್ದರಿಂದ ಯುವತಿಯರ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವುದನ್ನು ಆದ್ಯತೆಯಾಗಿಸಬೇಕಿದೆ.

2. ಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಸಹಾಯಕ್ಕೆಂದೇ ಮೀಸಲಾದ ಆಪ್ತಸಮಾಲೋಚನಾ ಕೇಂದ್ರಗಳು

3. ಮಕ್ಕಳ ಸುರಕ್ಷಾ ನೀತಿಯನ್ನು ಶಾಲೆಗಳಲ್ಲಿ ಅಳವಡಿಸಲು ಬೆಂಬಲ

4. ನಾಗರೀಕರ ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

5. ಪೊಲೀಸ್ ಚೌಕಿಗಳು ಮತ್ತು ಬಿಟಿಎಂ ಕ್ಷೇತ್ರದಾದ್ಯಂತ ನಿರಂತರ ಪೊಲೀಸ್ ಗಸ್ತು ತಿರುಗುವಿಕೆ